ಅಸಲು ದಾವಾ ಸಂಖ್ಯೆ 222-2018 ಪಿ.ಡಬ್ಲ್ಯೂ 1

ಸಾಕ್ಷಿಯು ದಿನಾಂಕ 26.11.2021. ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆಃ ಶ್ರೀ **TKRG** ನ್ಯಾಯಾವಾದಿಗಳಿಂದಃ

ನಾನು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿವೆ, ಅದರಲ್ಲಿರುವ ಅಂಶಗಳನ್ನು ಅರ್ಥೈಸಿಕೊಂಡ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ನಾನು ದಾವೆಯನ್ನು ಹಾಕುವ ಕಾಲಕ್ಕೆ ದಾವೆಯ ಜೊತೆಗೆ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ಸದರಿ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ಸಾಕ್ಷಿಯು ಗಣಕೀಕೃತ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ1, ಗಣಕೀಕೃತ ಮ್ಯೂಟೇಷನ್ ರಿಜಿಸ್ಟರ್ ಹಾಜರು ಪಡಿಸಿದ್ದು ಅದನ್ನು ನಿಪಿ.2 ಎಂದು, ಕಾನೂನು ತಿಳುವಳಿಕೆ ನೋಟಿಸ್ನ ಕಛೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.3 , ಎಂದು ಅಂಚೆ ರಶೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.4 ಎಂದು , ಅಂಚೆಸ್ವೀಕೃತಿಯನ್ನು ಅದನುನ ನಿಪಿ.5 ಎಂದು, ಮಂಜುರಾತಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.6 ಎಂದು ಕೈಬರಹ ಪಹಣಿಯ ದೃಡಿಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.7 ಎಂದು, ಒಟ್ಟು 04 ಪುಟಗಳುಳ್ಳ ಇಂಡಕ್ಸ ಆಫ್ ಲ್ಯಾಂಡ್‌ನ ದೃಡಿಕೃತ ನಕಲುನ್ನು ಹಾಜರು ಪಡಿಸಿದ್ದು ಅದನ್ನು ನಿಪಿ8 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಸಮಯ ಕೋರಿದ್ದು, ಸಮಯ ನೀಡಲಾಯಿತು.

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ